

# ಪಾಠಕಲಿಸಿದ ಮಾಮರ

■ **ಮಹೇಶ್ವರ ಹುರುಕಡ್ಲಿ**

ಒಂದಾನೊಂದು ಕಾಲದಲ್ಲಿ ಬೆಸುಗೆಹಳ್ಳಿ ಎಂಬ ಊರಿನಲ್ಲಿ ಪ್ರಾಕೃತಪ್ಪ ಎಂಬ ವೃದ್ಧನಿದ್ದನು. ಆತನು ತನ್ನ ಮೊಮ್ಮಗ ಇಷ್ಟಾರ್ಥನೊಂದಿಗೆ ಪುಟ್ಟ ಗುಡಿಸಲಿನಲ್ಲಿ ವಾಸಮಾಡುತ್ತಿದ್ದನು. ಪ್ರಾಕೃತಪ್ಪನಿಗೆ ಕಾಡಂಚಿನ ಹೊಲದಲ್ಲಿ ವಿಶಾಲವಾದ ಮಾಮರವೊಂದಿತ್ತು. ವರುಷಕ್ಕೊಮ್ಮೆ ಅದು ಸಾವಿರಾರು ಹಣ್ಣುಗಳನ್ನು ಬಿಡುತ್ತಿತ್ತು. ಅಜ್ಜ ಮತ್ತು ಮೊಮ್ಮಗನಿಗೆ ಆ ಕಾಲದಲ್ಲಿ ನಿತ್ಯವೂ ನೂರಾರು ಹಣ್ಣುಗಳು ಸಿಗುತ್ತಿದ್ದವು. ಅವರು ಅವುಗಳನ್ನು ಆರಿಸಿಕೊಂಡು ಬುಟ್ಟಿಯಲ್ಲಿ ತುಂಬಿ ಹಳ್ಳಿಯಲ್ಲೇ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರು.

ಇಷ್ಟಾರ್ಥ ಬೆಳೆದು ದೊಡ್ಡವನಾಗಿ ಪಟ್ಟಣದಲ್ಲಿ ಓದು ಮುಗಿಸಿ ಬೆಸುಗೆಹಳ್ಳಿಗೆ ಮರಳಿದನು. ವಯಸ್ಸಾದ ಅಜ್ಜ ಮೂಲೆ ಹಿಡಿದಿರುವಾಗ ಮನೆಯ ಜವಾಬ್ದಾರಿ ಇಷ್ಟಾರ್ಥನ ಮೇಲೆ ಬಿದ್ದಿತು. ಆದರೂ ಕಾಡಂಚಿನ ಆ ವಿಶಾಲವಾದ ಮಾಮರದ ಆದಾಯದಿಂದಲೇ ವರ್ಷವಿಡೀ ಅವರ ಜೀವನ ಸಾಗುತ್ತಿತ್ತು. ಒಂದು ದಿನ ಇಷ್ಟಾರ್ಥ ಸುತ್ತಾಡುತ್ತಾ ವಿಶಾಲವಾದ ಮಾಮರದ ಹತ್ತಿರಕ್ಕೆ ಬಂದ. ಹೆಬ್ಬಂಡೆಯಂತಹ ಕಾಂಡ, ಕಾಂಡದ ಸುತ್ತಲೂ ಎತ್ತರಕ್ಕೆ ಬೆಳೆದಿರುವ ದೊಡ್ಡ ದೊಡ್ಡ ಹುತ್ತಗಳು, ವಿಶಾಲವಾಗಿ ಚಾಚಿರುವ ರೆಂಬೆಗಳು, ಅವುಗಳಿಗೆ ಅಂಟಿಕೊಂಡಿರುವ ಹತ್ತಾರು ಜೇನುಗೂಡುಗಳು ಜೊತೆಗೆ ಪಕ್ಷಿಗಳು ಕೀಟ–ಚಿಟ್ಟೆಗಳನ್ನೂ ಕಂಡ. ಈ ಜೇನುಗೂಡುಗಳು, ಹುತ್ತಗಳು, ಪಕ್ಷಿ–ಕೀಟಗಳಿಂದ ಮರದ ಅರ್ಧದಷ್ಟು ಹಣ್ಣುಗಳು ನಮಗೆ ದಕ್ಕುತ್ತಿಲ್ಲ ಇವುಗಳಿಂದ ಮರವನ್ನು ಮುಕ್ತಗೊಳಿಸಿದರೆ ಮರದ ಎಲ್ಲಾ ಹಣ್ಣುಗಳೂ ನಮಗೆ ಸಿಗುತ್ತವೆ ಆಗ ಹೆಚ್ಚಿನ ಆದಾಯ ಬರಬಹುದೆಂದು ಯೋಚಿಸಿದ.

ಮರುದಿನವೇ ಪಟ್ಟಣದಿಂದ ಜೆಸಿಬಿ ತರಿಸಿ ಹುತ್ತವನ್ನ ಬಗೆಸಿಹಾಕಿ, ಜೇನುನೊಣಗಳಿಗೆ ಬೆಂಕಿ ಇಟ್ಟು ಓಡಿಸಿದ. ಜೊತೆಗೆ ವಿವಿಧ ರಾಸಾಯನಿಕಗಳನ್ನು ಮರದ ಸುತ್ತಮುತ್ತಲು ಚೆಲ್ಲಿ ಕ್ರಿಮಿಕೀಟಗಳನ್ನು ಕೊಂದು ಹಾಕಿದ. ಈಗ ಅವನಿಗೆ ಮಾಮರ ಚೊಕ್ಕಟವಾದಂತೆ ಕಂಡಿತು. ಮರುವರ್ಷ ಮಾಮರ ಹೂಬಿಡುವ ಸಮಯ ಬಂದಿತು. ಇಡೀ ಮರವೇ ಅಸಂಖ್ಯಾತ ಹೂಗಳಿಂದ ತುಂಬಿ ತುಳುಕುತ್ತಿತ್ತು. ಇದನ್ನು ಕಂಡು ಇಷ್ಟಾರ್ಥನಿಗೆ ಸಂತೋಷವಾಯಿತು. ಆದರೆ ಕೆಲವೇ ದಿನಗಳಲ್ಲಿ ಅದರ ಅರ್ಧದಷ್ಟು ಹೂಗಳು ನೆಲಕ್ಕುದುರಿದವು, ಇನ್ನೂ ಕೆಲದಿನಗಳಲ್ಲಿ ಸಣ್ಣ ಸಣ್ಣ ಹೀಚುಗಾಯಿಗಳಿಗೆ ಶಿಲೀಂಧ್ರಗಳು ಹಿಡಿದು ಕಾಯಿಗಳೂ ಉದುರಲು ಶುರುವಾಯಿತು. ಇಷ್ಟಾರ್ಥನಿಗೆ ದಿಗಿಲಾಗಿ ಯಾವುಯಾವುದೋ ರಾಸಾಯನಿಕಗಳನ್ನು ತಂದು ಸಿಂಪಡಿಸಿದ. ಆದರೆ ರೋಗ ಮಾತ್ರ ಕಡಿಮೆಯಾಗಲಿಲ್ಲ ಕೊನೆಗೆ ಇಡಿ ಮರವೇ ಬೋಳಾಗಿ ಕೇವಲ ಏಳೆಂಟು ಹಣ್ಣುಗಳು ಮಾತ್ರ ಇಷ್ಟಾರ್ಥನಿಗೆ ದಕ್ಕಿದವು.

ಏಕೆ ಹೀಗಾಯಿತೆಂದು ದಾರಿಕಾಣದೇ ಕೈಹೊತ್ತು ಕೂತಿದ್ದ ಇಷ್ಟಾರ್ಥನಿಗೆ ಅವನಜ್ಜ ಪ್ರಾಕೃತಪ್ಪ ತಿಳಿಹೇಳಿದ 'ಮಗೂ ಆ ಮಾಮರದ ಕೊಂಬೆಗಳಲ್ಲಿದ್ದ ಜೇನುನೊಣಗಳು ಹೆಚ್ಚಿನ ಪ್ರಮಾಣದಲ್ಲಿ ಪರಾಗಸ್ಪರ್ಶ ಮಾಡಿ ಹೂಗಳೆಲ್ಲಾ ಕಾಯಿಗಳಾಗುವಂತೆ ಮಾಡುತ್ತಿದ್ದವು, ಹುತ್ತಗಳು ಮಳೆನೀರನ್ನು ಹಿಡಿದಿಟ್ಟುಕೊಂಡು ಮರಕ್ಕೆ ನೀಡುತ್ತಿದ್ದವು ಅಲ್ಲದೆ ಅದರೊಳಗಿದ್ದ ಕೋಟ್ಯಂತರ ಕ್ರಿಮಿಕೀಟಗಳು ಇಡೀ ಮರದ ತುಂಬಾ ಓಡಾಡಿ ಹೀಚುಗಾಯಿಗಳಿಗೆ ಬಿದ್ದಿದ್ದ ಶಿಲೀಂಧ್ರಗಳನ್ನು ಹಿಡಿದು ತಿನ್ನುತ್ತಿದ್ದವು. ಪಕ್ಷಿಗಳ ಹಿಕ್ಕೆ ಅದಕ್ಕೆ ಸಾವಯವ ಗೊಬ್ಬರವಾಗಿತ್ತು. ಈ ಎಲ್ಲ ಜೀವಿಗಳ ಸಹಕಾರದಿಂದ ಅದು ಪ್ರತಿ ವರ್ಷ ಸಾವಿರಾರು ಆರೋಗ್ಯವಂತ ಹಣ್ಣುಗಳನ್ನು ಬಿಟ್ಟು ಅದರಲ್ಲಿ ಅರ್ಧದಷ್ಟು ಹಣ್ಣುಗಳನ್ನು ನಮಗೆ ಪುಕ್ಕಟೆಯಾಗಿ ನೀಡುತ್ತಿತ್ತು. ಉಳಿದವುಗಳು ನಿಸರ್ಗದ ಪಾಲು. ಆದರೆ ನೀನು ದುರಾಸೆಗೆ ಬಿದ್ದು ಎಲ್ಲವನ್ನೂ ಹಾಳುಮಾಡಿಕೊಂಡೆ' ಎಂದನು. ಅಜ್ಜನ ಮಾತುಗಳು ಇಷ್ಟಾರ್ಥನಿಗೆ ನಾಟಿದವು. ತನ್ನ ದುರಾಸೆಯ ಬಗ್ಗೆ ಅವನಿಗೆ ನಾಚಿಕೆ ಉಂಟಾಯಿತು. ಜೊತೆಗೆ ಅಜ್ಜನ ಜ್ಞಾನದ ಪರಿಚಯವೂ ಆಯಿತು. ಇನ್ನುಂದೆ ಪ್ರಕೃತಿಯನ್ನು ಗೌರವಿಸುತ್ತಾ ಬದುಕಬೇಕೆಂದು ನಿಶ್ಚಯಿಸಿದನು. ■